ನೋಂದಾಯಿತ ಅಂಚೆ ಮತ್ತು ಸ್ವೀಕೃತಿ ಬಾಕಿ

ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 07 ಡಿಇಕ್ಯೂ (1) 2012/1695

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 5/09/2018.

## ಹಿಂಬರಹ

ಸರ್ಕಾರದ ಆದೇಶ ಸಂ.ಇಡಿ 183 ಡಿಟಿಇ 2017 ದಿನಾಂಕ: 09-08-2018ನ್ನು ಸಂಬಂಧಪಟ್ಟವರಿಗೆ ಮುಂದಿನ ಕ್ರಮಕ್ಕಾಗಿ ಈ ಮೂಲಕ ರವಾನಿಸಲಾಗಿದೆ.

ನಿರ್ದೇಶಕರು

ಇವರಿಗೆ,

ಶ್ರೀ. ಗಜೇಂದ್ರಸಿಂಗ್ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಜಿ.ಆರ್.ಸಿ.ಐ.ಬಿ.ಎಂ.ಸಂಸ್ಥೆ (ಎಸ್.ಆರ್.ಸಿ) ಬೆಂಗಳೂರು.(ಪ್ರಾಚಾರ್ಯರ ಮೂಲಕ)

**ಪ್ರತಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ**

1) ಮಹಾಲೇಖಪಾಲರು (ಎ ಮತ್ತು ಇ / ಲೆಕ್ಕಪರಿಶೋಧನೆ-1/2),ಕರ್ನಾಟಕ ವಲಯ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
4) ಜಂಟಿ ನಿರ್ದೇಶಕರು(ಪರೀಕ್ಷೆ) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
5) ಜಂಟಿ ನಿರ್ದೇಶಕರು (ತನಿಖೆ) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
6) ಸಹಾಯಕ ನಿರ್ದೇಶಕರು (ಎಸಿಎಂ) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
7) ಪ್ರಾಚಾರ್ಯರು, ಸರ್ಕಾರಿ ಜಿ.ಆರ್.ಸಿ.ಐ.ಬಿ.ಎಂ.ಸಂಸ್ಥೆ (ಎಸ್.ಆರ್.ಸಿ) ಬೆಂಗಳೂರು
8) ಪ್ರಾಚಾರ್ಯರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು.
9) ನಿರ್ದೇಶಕರ ಆಪ್ತ ಶಾಖೆಗೆ.
10) ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
11) ಕಛೇರಿ ಪ್ರತಿ.

7821

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಗಜೇಂದ್ರಸಿಂಗ್, ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು ಇವರ ಮೇಲ್ಮನವಿ ಬಗ್ಗೆ ಆದೇಶ.

ಓದಲಾಗಿದೆ:

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇವರ ಆದೇಶ ಸಂಖ್ಯೆ: ಡಿಟಿಇ 07 ಡಿಇಕ್ಯೂ (1) 2012/2274, ದಿನಾಂಕ: 26-09-2014.
2. ಮಾನ್ಯ ಕರ್ನಾಟಕ ಆಡಳಿತ ಮಂಡಳಿ ಅರ್ಜಿ ಸಂಖ್ಯೆ: 8263/2014, ದಿನಾಂಕ: 21-08-2017 ರ ತೀರ್ಪು.
3. ಶ್ರೀ ಗಜೇಂದ್ರ ಸಿಂಗ್ ಇವರ ಮನವಿ / ಮೇಲ್ಮನವಿ ದಿನಾಂಕ: 18-09-2017.
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇವರ ಪತ್ರ ಸಂಖ್ಯೆ: ಡಿಟಿಇ 07 ಡಿಇಕ್ಯೂ (1) 2012/3025, ದಿನಾಂಕ: 09-02-2018.

DEQ 07/Reg(Al)

C 1418

## ಪ್ರ ಸ್ತಾ ವ ನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ, ಶ್ರೀ ಗಜೇಂದ್ರಸಿಂಗ್, ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಆರ್ ಸಿ ಇನ್ಸ್‌ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಬೆಂಗಳೂರು ಮತ್ತು ಶ್ರೀಮತಿ ಕಮಲ, ಅಧೀಕ್ಷಕರು, ಸರ್ಕಾರಿ ಆರ್ ಸಿ ಇನ್ಸ್‌ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಬೆಂಗಳೂರು ಇವರುಗಳು ಸಂಸ್ಥೆಯ ಮೇಲಾಧಿಕಾರಿಗಳ ಆದೇಶವನ್ನು ಉಲ್ಲಂಘಿಸಿ ಪ್ರಾಂಶುಪಾಲರು ಸಹಿ ಮಾಡುವ ಜಾಗದಲ್ಲಿ ಶ್ರೀಮತಿ ಕಮಲ ರವರು ಪ್ರಾಂಶುಪಾಲರ ಪರವಾಗಿ ಸಹಿ ಮಾಡಿ ಶ್ರೀ ಗಜೇಂದ್ರ ಸಿಂಗ್ ರವರಿಗೆ ಮೂರು ಲಕ್ಷ ರೂಪಾಯಿಗಳ ವೈಯಕ್ತಿಕ ಸಾಲವನ್ನು ಬ್ಯಾಂಕಿನಿಂದ ಪಡೆಯಲು ಸಹಕರಿಸಿರುವ ವರ್ತನೆಯು ಸರ್ಕಾರಿ ನೌಕರರಿಗೆ ತರವಲ್ಲದ ವರ್ತನೆಯಾಗಿದ್ದು, ಇದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ರ ಉಲ್ಲಂಘನೆಯಾಗಿರುವುದು ಇಲಾಖಾ ವಿಚಾರಣೆಯಿಂದ ಸಾಬೀತಾದ ಕಾರಣ, ಶ್ರೀ ಗಜೇಂದ್ರಸಿಂಗ್ ರವರಿಗೆ ಕನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರಡಿ ಇವರ ಮೂಲ ವೇತನವನ್ನು ಕಾಲಿಕ ವೇತನ ಶ್ರೇಣಿ ರೂ. 37400-67000 ರಲ್ಲಿ ಕನಿಷ್ಟ ವೇತನ ರೂ. 37400 ಕ್ಕೆ ಸಂಚಿತ ಪರಿಣಾಮವಿಲ್ಲದಂತೆ 3 ವರ್ಷಗಳ ಅವಧಿಗೆ ಇಳಿಸಿ ನಿಗಧಿಪಡಿಸುವ ದಂಡನೆ ವಿಧಿಸಲಾಗಿದೆ. ಅದೇ ರೀತಿ, ಶ್ರೀಮತಿ ಕಮಲ ರವರಿಗೆ ಇವರ ಮೂಲ ವೇತನವನ್ನು ಕಾಲಿಕ ವೇತನ ಶ್ರೇಣಿ ರೂ. 20000-36300 ರಲ್ಲಿ ಕನಿಷ್ಟ ವೇತನ ರೂ. 20000 ಕ್ಕೆ ಸಂಚಿತ ಪರಿಣಾಮವಿಲ್ಲದಂತೆ 1 ವರ್ಷದ ಅವಧಿಗೆ ಇಳಿಸಿ ನಿಗಧಿಪಡಿಸುವ ದಂಡನೆ ವಿಧಿಸಲಾಗಿದೆ ಮತ್ತು ಇವರುಗಳು ಈ ಅವಧಿಯಲ್ಲಿ ಯಾವುದೇ ವಾರ್ಷಿಕ ವೇತನ ಬಡ್ತಿಗೆ ಅರ್ಹರಿರುವುದಿಲ್ಲವೆಂದು ತಿಳಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ತೀರ್ಪಿನಲ್ಲಿ, ಶ್ರೀ ಗಜೇಂದ್ರಸಿಂಗ್ ರವರು ಸದರಿ ದಂಡನಾದೇಶದ ಬಗ್ಗೆ ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸುವಂತೆ ಮತ್ತು ಈ ಮೇಲ್ಮನವಿಯನ್ನು ಮೇಲ್ಮನವಿ ಪ್ರಾಧಿಕಾರವು ಮೂರು ತಿಂಗಳ ಅವಧಿಯಲ್ಲಿ ಇತ್ಯರ್ಥಪಡಿಸುವಂತೆ ತಿಳಿಸಲಾಗಿದೆ.

ಪುಟ 02ಕ್ಕೆ

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಶ್ರೀ ಗಜೇಂದ್ರಸಿಂಗ್ ರವರು ಸಲ್ಲಿಸಿದ ಮೇಲ್ಮನವಿಯಲ್ಲಿನ ಅಂಶಗಳನ್ನು ಮೇಲ್ಮನವಿ ಪ್ರಾಧಿಕಾರವಾದ ಸರ್ಕಾರವು ಪರಿಶೀಲಿಸಿದೆ. ಪ್ರಕರಣ ನಡೆದ ಸಂದರ್ಭದಲ್ಲಿ ಸದರಿ ಸಂಸ್ಥೆಯ ಪ್ರಾಂಶುಪಾಲರು ಅನ್ಯಕಾರ್ಯದ ನಿಮಿತ್ತ ತೆರಳಿದ್ದ ಕಾರಣ ಮತ್ತು ಪ್ರಾಂಶುಪಾಲರ ಹುದ್ದೆಯ ಕಾರ್ಯಭಾರವನ್ನು ತಾತ್ಕಾಲಿಕವಾಗಿ ನಿರ್ವಹಿಸುವಂತೆ ಶ್ರೀ ಗಜೇಂದ್ರಸಿಂಗ್ ರವರಿಗೆ ಪ್ರಾಂಶುಪಾಲರು ಲಿಖಿತವಾಗಿ ಸೂಚಿಸಿರುತ್ತಾರೆ. ಆದರೆ ಯಾವುದೇ ಸಿ ಟಿ ಸಿ ಪ್ರಪತ್ರವನ್ನು ಸಹಿ ಮಾಡಿ ನೀಡಿರುವುದಿಲ್ಲ. ಈ ಸಂದರ್ಭದಲ್ಲಿ ಶ್ರೀ ಗಜೇಂದ್ರಸಿಂಗ್ ರವರ ಸಂಬಂಧಿಗೆ ತುರ್ತು ವೈದ್ಯಕೀಯ ಚಿಕಿತ್ಸೆಯ ಸಲುವಾಗಿ ಹಣಕಾಸಿನ ಅವಶ್ಯಕತೆ ಉದ್ಭವಿಸಿದ್ದು, ಇದನ್ನು ಪೂರೈಸಲು, ಶ್ರೀ ಗಜೇಂದ್ರಸಿಂಗ್ ರವರು ಬ್ಯಾಂಕಿನಿಂದ ವೈಯಕ್ತಿಕ ಸಾಲವನ್ನು ಪಡೆಯಲು ನಿರ್ಧರಿಸಿರುತ್ತಾರೆ. ಆದರೆ, ಬ್ಯಾಂಕಿನ ಸಾಲದ ಅರ್ಜಿಗೆ ವರಮಾನ / ವೇತನಕ್ಕೆ ಸಂಬಂಧಿಸಿದಂತೆ ಬಟವಾಡೆ ಅಧಿಕಾರಿಯ ಅಂದರೆ ಪ್ರಾಂಶುಪಾಲರ ದೃಢೀಕರಣದ ಸಹಿ ಅಗತ್ಯವಿದ್ದ ಕಾರಣ ಹಾಗೂ ರೆಗ್ಯುಲರ್ ಪ್ರಾಂಶುಪಾಲರು ಅನ್ಯಕಾರ್ಯದ ನಿಮಿತ್ತ ತೆರಳಿದ್ದ ಕಾರಣ, ಪ್ರಾಂಶುಪಾಲ ಹುದ್ದೆಯ ತಾತ್ಕಾಲಿಕ ಕಾರ್ಯಭಾರವನ್ನು ಹೊಂದಿದ್ದ ಶ್ರೀ ಗಜೇಂದ್ರಸಿಂಗ್ ರವರೇ ತಮ್ಮ ಸಾಲದ ಅರ್ಜಿಗೆ ಬಟವಾಡೆ ಅಧಿಕಾರಿಯ ದೃಢೀಕರಣದ ಸಹಿ ಮಾಡಿದ್ದಲ್ಲಿ ಅದನ್ನು ಬ್ಯಾಂಕಿನವರು ಮಾನ್ಯ ಮಾಡದಿರುವ ಸಾಧ್ಯತೆ ಇದ್ದ ಕಾರಣ, ಈ ದೃಢೀಕರಣದ ಸಹಿಯನ್ನು ಪ್ರಾಂಶುಪಾಲರ ಪರವಾಗಿ ಶ್ರೀಮತಿ ಕಮಲ ರವರು ಮಾಡಿರುತ್ತಾರೆ. ಇವರು ಸಂಸ್ಥೆಯ ಆಡಳಿತಕ್ಕೆ ಸಂಬಂಧಿಸಿದಂತೆ ಪ್ರಾಂಶುಪಾಲರ ನಂತರದ ಅಧಿಕಾರಿಯಾಗಿರುತ್ತಾರೆ. ಇದು, ವೈಯಕ್ತಿಕ ಸಾಲದ ಅರ್ಜಿಯಾಗಿದ್ದು, ತುರ್ತು ಹಣದ ಅವಶ್ಯಕತೆ ಇದ್ದ ಕಾರಣ ಸದರಿ ಸಾಲದ ಅರ್ಜಿಗೆ ಅಧೀಕ್ಷಕರಿಂದ ವೇತನದ ಬಗ್ಗೆ ದೃಢೀಕರಣದ ಸಹಿ ಪಡೆಯಲಾಗಿರುತ್ತದೆ ಎಂದು, ಇದರಿಂದ ಸಂಸ್ಥೆಗೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲವೆಂದು ಮನವಿ ಮಾಡುತ್ತಾ, ವಿಧಿಸಿರುವ ದಂಡನೆಯನ್ನು ರದ್ದುಪಡಿಸುವಂತೆ ಮೇಲ್ಮನವಿ ಸಲ್ಲಿಸಲಾಗಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇವರು, ಪ್ರಾಂಶುಪಾಲರ ಪರವಾಗಿ ಸಾಲದ ಅರ್ಜಿಗೆ ಅಧೀಕ್ಷಕರು ದೃಢೀಕರಣ ಸಹಿ ಮಾಡಿರುವುದು ಮತ್ತು ಇದಕ್ಕೆ ಶ್ರೀ ಗಜೇಂದ್ರಸಿಂಗ್ ರವರು ಸಹಕರಿಸಿರುವ ಆರೋಪಗಳು ಇಲಾಖಾ ವಿಚಾರಣೆಯಿಂದ ಸಾಬೀತಾಗಿರುವ ಕಾರಣ, ಅದರಂತೆ ವಿಧಿಸಿರುವ ದಂಡನೆಯು ನಿಯಮಾನುಸಾರ ಇರುತ್ತದೆ ಎಂದು ವರದಿ ಮಾಡಿರುತ್ತಾರೆ.

ಪ್ರಕರಣದಲ್ಲಿನ ಎಲ್ಲಾ ಅಂಶಗಳನ್ನು ಸರ್ಕಾರವು ಕೂಲಂಕಶವಾಗಿ ಪರಿಶೀಲಿಸಿದೆ. ಶ್ರೀ ಗಜೇಂದ್ರಸಿಂಗ್ ರವರಿಗೆ ಯಾವ ಸಕಾರಣಗಳಿಂದಾಗಿ ಹಣದ ಅವಶ್ಯಕತೆ ಇತ್ತು ಮತ್ತು ಯಾವ ಸಂದರ್ಭ, ಸನ್ನಿವೇಶದಲ್ಲಿ ವೈಯಕ್ತಿಕ ಸಾಲದ ಅಗತ್ಯತೆ ಇತ್ತು ಹಾಗೂ ಆ ಸಂದರ್ಭದಲ್ಲಿ ಸಂಸ್ಥೆಯ ಮೇಲಧಿಕಾರಿಗಳು / ಬಟವಾಡೆ ಅಧಿಕಾರಿಗಳು ಲಭ್ಯವಿಲ್ಲದಿರುವುದನ್ನು ಸರ್ಕಾರವು ಗಮನಿಸಿದೆ. ಹಣದ ಅವಶ್ಯಕತೆಯು ವೈಯಕ್ತಿಕದ್ದಾಗಿದ್ದು, ಸದರಿ ಸಾಲವನ್ನು ಪಡೆಯುವುದರಿಂದ ಸಂಸ್ಥೆಗೆ ಯಾವುದೇ ಬಾಧಕ ವಿಲ್ಲದಿರುವುದನ್ನು ಮತ್ತು ಸಂಸ್ಥೆಗೆ / ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಇಲ್ಲದಿರುವುದನ್ನು, ಸಾಲವನ್ನು ಪಡೆಯುವುದರ ಹಿಂದೆ ಯಾವುದೇ ದುರುದ್ದೇಶ ಇಲ್ಲದಿರುವುದನ್ನು ಸರ್ಕಾರವು ಗಮನಿಸಿದೆ. ಇದರ ಜೊತೆಗೆ, ಇಬ್ಬರು ಆರೋಪಿತರ ವಿರುದ್ಧದ ಆರೋಪಗಳು ಒಂದು ರೀತಿಯಲ್ಲಿ ಒಂದೇ ತೆರನಾಗಿದ್ದರೂ ಸಹ ವಿಧಿಸಿರುವ ದಂಡನೆಯ ಸ್ವರೂಪದಲ್ಲಿ ಭಿನ್ನತೆಯನ್ನು ಕಾಣಬಹುದಾಗಿದೆ. ಒಬ್ಬ ಆರೋಪಿಯ ವೇತನವನ್ನು ಕನಿಷ್ಟ ಹಂತಕ್ಕೆ ಒಂದು ವರ್ಷದ ಅವಧಿಗೆ ಇಳಿಸಿದ್ದು, ಅದೇ ಮತ್ತೊಮ್ಮ ಆರೋಪಿಯ ವೇತನವನ್ನು ಕನಿಷ್ಟ

ಪುಟ 3ಕ್ಕೆ

ಹಂತಕ್ಕೆ ಮೂರು ವರ್ಷಗಳ ಅವಧಿಗೆ ಇಳಿಸಿರುವುದನ್ನು ಗಮನಿಸಬಹುದಾಗಿದೆ. ಸಾಲದ ಅರ್ಜಿಗೆ ರೆಗ್ಯುಲರ್ ಪ್ರಾಂಶುಪಾಲರು ಸಹಿ ಮಾಡಿದ್ದಲ್ಲಿ ಯಾವುದೇ ಲೋಪ ಇದ್ದಿರುತ್ತಿರಲಿಲ್ಲ. ಆದರೆ, ಇವರ ಅನುಪಸ್ಥಿತಿಯಲ್ಲಿ ಇವರ ನಂತರದ ಅಧಿಕಾರಿಯು ಸಹಿ ಮಾಡಿರುವುದು ಒಂದು ರೀತಿಯ ಕಾರ್ಯವಿಧಾನದ ಲೋಪವೆಂದು ಭಾವಿಸಿದರೂ, ಯಾವ ಸನ್ನಿವೇಶದಲ್ಲಿ ಇವರು ಸಹಿ ಮಾಡಿರುವರು ಎಂಬುದು ಸಹ ಪರಿಗಣನಾರ್ಹ. ಸುತ್ತೋಲೆ ಸಂಖ್ಯೆ: ಸಿಆಸುಇ 18 ಸೇಇವಿ 2001, ದಿನಾಂಕ: 14-09-2001 ರಲ್ಲಿ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ವಿಧಿಸಬಹುದಾದ ದಂಡನೆಗಳ ಬಗ್ಗೆ ಉದಾಹರಣೆಗಳನ್ನು ನೀಡಲಾಗಿದ್ದು ಕಾರ್ಯವಿಧಾನದ ಲೋಪಕ್ಕೆ ಮೊದಲ ಸಂದರ್ಭದಲ್ಲಿ ವಾಗ್ದಂಡನೆಯನ್ನು ವಿಧಿಸುವಂತೆ ತಿಳಿಸಲಾಗಿದೆ. ಈ ಪ್ರಕರಣವೂ ಸಹ ಮೊದಲ ಸಂದರ್ಭದಲ್ಲಿ ಆಗಿರುವಂತದ್ದು ಎಂಬುದನ್ನು ಗಮನಿಸಬೇಕಾದ ಅಂಶ.

ಮೇಲಿನ ಪರಾಮರ್ಶನೆಯ ಹಿನ್ನೆಲೆಯಲ್ಲಿ, ಶ್ರೀ ಗಜೇಂದ್ರಸಿಂಗ್ ರವರು ಸಲ್ಲಿಸಿದ ಮೇಲ್ಮನವಿಯನ್ನು ಸರ್ಕಾರವು ಪುರಸ್ಕರಿಸಿ, ಕೆಳಕಂಡಂತೆ ಆದೇಶಿಸುತ್ತದೆ.

<u>ಸರ್ಕಾರದ ಆದೇಶ ಸಂಖ್ಯೆ: ಇಡಿ 183 ಡಿಟಿಇ 2017,</u>

<u>ಬೆಂಗಳೂರು, ದಿನಾಂಕ:09ನೇ ಆಗಸ್ಟ್, 2018</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಗಜೇಂದ್ರಸಿಂಗ್, ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು ಇವರ, ದಂಡನಾದೇಶ ಸಂಖ್ಯೆ: ಡಿಟಿಇ 07 ಡಿಟಿಕ್ಯೂ (1) 2012, ದಿನಾಂಕ: 26-09-2014 ರ ಬಗ್ಗೆ ಸಲ್ಲಿಸಿದ ದಿನಾಂಕ: 18-09-2017 ರ ಮೇಲ್ಮನವಿಯನ್ನು ಮೇಲ್ಮನವಿ ಪ್ರಾಧಿಕಾರವಾದ ಸರ್ಕಾರವು ಪರಿಗಣಿಸಿ, ಸಂಖ್ಯೆ: ಡಿಟಿಇ 07 ಡಿಟಿಕ್ಯೂ (1) 2012, ದಿನಾಂಕ: 26-09-2014 ರಲ್ಲಿ ಇವರಿಗೆ ವಿಧಿಸಿದ ದಂಡನೆಯನ್ನು ಮಾತ್ರ ಕೆಳಕಂಡಂತೆ ಮಾರ್ಪಡಿಸಿ ಆದೇಶಿಸಿದೆ.

1ನೇ ಆರೋಪಿ ಶ್ರೀ ಗಜೇಂದ್ರಸಿಂಗ್, ಆಯ್ಕೆ ಶ್ರೇಣಿ ಉಪನ್ಯಾಸಕರು, ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮ, 1957 ರ ನಿಯಮ 8 ರ ರೀತ್ಯಾ ಉಪನಿಯಮ 4(ಎ) ರಂತೆ ವೇತನ ಶ್ರೇಣಿ ರೂ. 37400-67000 ರಲ್ಲಿ ಕನಿಷ್ಟ ವೇತನ ರೂ. 37400 ಕ್ಕೆ ಸಂಚಿತ ಪರಿಣಾಮವಿಲ್ಲದಂತೆ **<u>1 ವರ್ಷದ ಅವಧಿಗೆ</u>** ಕೆಳಗಿನ ಹಂತಕ್ಕೆ ಅವರ ಮೂಲ ವೇತನವನ್ನು ಇಳಿಸಿ ನಿಗದಿಪಡಿಸಿದೆ. ಈ ಅವಧಿಯಲ್ಲಿ ಸದರಿಯವರು ಯಾವುದೇ ವಾರ್ಷಿಕ ವೇತನ ಬಡ್ತಿಗೆ ಅರ್ಹರಿರುವುದಿಲ್ಲ.

ಈ ಆದೇಶವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 25 ರಲ್ಲಿ ಪ್ರದತ್ತವಾದ ಅಧಿಕಾರದಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್ ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ)

ಗೆ,

1. ಮಹಾಲೇಖಾಪಾಲರು (ಎ ಮತ್ತು ಇ / ಲೆಕ್ಕಪರಿಶೋಧನೆ-1 / 2), ಕರ್ನಾಟಕ, ಬೆಂಗಳೂರು

ಪುಟ 4ಕ್ಕೆ

2. ನಿರ್ದೇಶಕರು, ತಾಂತ್ರಿಕ ಶಿಕ್ಷಣ, ಬೆಂಗಳೂರು
3. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
4. ಪ್ರಾಂಶುಪಾಲರು, ಸರ್ಕಾರಿ ಆರ್ ಸಿ ಇನ್ಸ್‌ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಬೆಂಗಳೂರು *
5. ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು *
6. ಸಂಬಂಧಪಟ್ಟ ಅಧಿಕಾರಿ *
7. ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿ / ಒಡಿಜಿಸಿ

* ನಿರ್ದೇಶಕರು, ತಾಂತ್ರಿಕ ಶಿಕ್ಷಣ, ಬೆಂಗಳೂರು ಇವರ ಮುಖಾಂತರ